## ಅರ್ಥಪೂರ್ಣ, ಆದರೆ ಅಪೂರ್ಣ...

2019ರ ಸ್ವಾಗತದ ಸಂದರ್ಭದಲ್ಲಿ '19'ರ ಸಂಖ್ಯೆಯನ್ನು ಸಂಕೇತವಾಗಿಸಿಕೊಂಡು ಪರಿಚಯಿಸಿದ ಹೆಮ್ಮೆಯ ಕನ್ನಡತಿಯರ ಲೇಖನಗುಚ್ಛ ಓದಿ ತುಂಬಾ ಖುಷಿಯಾಯಿತು. ಹೆಣ್ಣು ಸಾಧನೆಯ ಪ್ರತೀಕ. ಪ್ರತಿ ಹೆಣ್ಣು ಕೂಡ ಸಾಧಕಿಯೇ. ನಾವೆಲ್ಲ ನಮ್ಮ ನಮ್ಮ ಮನೆಗಳ ಕಸ ಗುಡಿಸುತ್ತೇವೆ. ಆದರೆ, ಈ ನಾಡಿನ ಬೀದಿಬೀದಿಯ ಕಸ ಗುಡಿಸುವ ಕಾರ್ಮಿಕ ಹೆಣ್ಣುಮಕ್ಕಳು ಆರೋಗ್ಯಮಾತೆಯರು. ಸಮಾಜದ ನೈರ್ಮಲ್ಯ ಕಾಪಾಡುವಲ್ಲಿ ದೊಡ್ಡ ಪಾತ್ರ ವಹಿಸುವ ಪೌರಕಾರ್ಮಿಕ ಹೆಣ್ಣುಮಕ್ಕಳ ಪ್ರತಿನಿಧಿ ಸಾಧಕಿಯರ ಪಟ್ಟಿಯಲ್ಲಿರಬೇಕಿತ್ತು. ಇರಲಿ, ಈ ಸಾಧಕಿಯರಿಗೆ ಹಾಗೂ ಅವರನ್ನು ಪರಿಚಯಿಸಿದ 'ಸುಧಾ'ಕ್ಕೆ ಅಭಿನಂದನೆಗಳು.

—ಸುಬ್ಬು ಹೊಲೆಯಾರ್, ಬೆಂಗಳೂರು




## ಸೊಗಸಾದ ಲೇಖನ

'ಹೆಮ್ಮೆಯ ಕನ್ನಡತಿಯರು 2019' ಮುಖಪುಟ ಲೇಖನ (ಸುಧಾ, ಜ. 10) ಸೊಗಸಾಗಿ ಮೂಡಿಬಂದಿದೆ. 'ಸುಧಾ' ಸಾರ್ಥಕವಾದ ಕೆಲಸವನ್ನು ಮಾಡಿದೆ. ಪುರುಷರೆಲ್ಲರೂ ಈ ಲೇಖನ ಓದಲೇಬೇಕು.

—ವಿಭಾ ಮುರಳೀಧರ್, ತುಮಕೂರು; ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

## ಕಾಮನಬಿಲ್ಲು ಧಾರವಾಡ

'ನೋಡು ಬಾರಾ ಧಾರವಾಡ; ಕನ್ನಡ ಸಾಂಸ್ಕೃತಿಕ ಲೋಕದ ಕಾಮನಬಿಲ್ಲು' (ಇ.ಎಸ್. ಸುಧೀಂದ್ರಪ್ರಸಾದ್) ಬರಹ ಸಾಹಿತ್ಯ ಸಮ್ಮೇಳನಕ್ಕೆ 'ಸುಧಾ'ದ ವಿಶಿಷ್ಟ ಪರಿಕಲ್ಪನೆ. ಸಮ್ಮೇಳನದ ನೆಪದಲ್ಲಿ ಆತಿಥ್ಯ ವಹಿಸಿದ ಊರನ್ನು ಕಾಣಿಸುವ ಪ್ರಯತ್ನ ಇಷ್ಟವಾಯಿತು.

—ನಾ.ಕು. ಗಣೇಶ್, ಬೆಂಗಳೂರು, ಎ.ಕೆ. ಅನಂತಮೂರ್ತಿ, ಬೆಂಗಳೂರು

## ಸಮಯೋಚಿತ.. ಆದರೆ?

'ನೋಡು ಬಾರಾ ಧಾರವಾಡ..' ಸಮಯೋಚಿತ. ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ನಂತರ ಸುಮಾರು ಇಪ್ಪತ್ತು ವರ್ಷ ವಿಜ್ಞಾನಿಯಾಗಿ ಧಾರವಾಡದಲ್ಲಿಯೇ ಸೇವೆ ಸಲ್ಲಿಸಿದ ನನಗೆ ಈ ಸಂಸ್ಥೆಯ ಚಿತ್ರ ಹಾಗೂ ಉಪಯುಕ್ತ ಮಾಹಿತಿ ಬರಹದಲ್ಲಿ ಪ್ರಸ್ತಾಪಿಸದೆ ಇರುವುದು ಮನಸ್ಸಿಗೆ ನೋವು ತಂದಿತು. ಪಕ್ಕದಲ್ಲಿ ಗ್ರಾಮೀಣ ಅಭಿವೃದ್ಧಿ ಕೇಂದ್ರ ಹಾಗೂ ಕೃಷಿ ಮತ್ತು ಗ್ರಾಮೀಣ ಅಧ್ಯಯನ ಸಂಸ್ಥೆ ಸುಮಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿವೆ.



—ಡಾ. ಗಿರಿರಾಜ ಕುಲಕರ್ಣಿ, ಬೆಂಗಳೂರು

## ಖಾಲಿ ಸಾಲುಗಳ ಸ್ವಾರಸ್ಯ



ಚಂದ್ರಶೇಖರ ಕಂಬಾರ ಅವರ ಪತ್ನಿ ಸತ್ಯಭಾಮ ಅವರ ಸಂದರ್ಶನ ತುಂಬ ಮಹತ್ವದ ಸಂದರ್ಶನ. ಕಂಬಾರರ ಹೆಂಡತಿ ಎಂಬ ಕಾರಣಕ್ಕಾಗಿಯೇ ಸತ್ಯಭಾಮ ಅವರ ಸಂದರ್ಶನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಕಾರಣದಲ್ಲಿಯೇ ಒಂದು ಅವಲಂಬನೆ ಇದೆ. ಸಂದರ್ಶನದಲ್ಲಿಯೂ ಮೇಲುನೋಟಕ್ಕೆ ಕಂಬಾರರ ಮೇಲೆ ಸತ್ಯಭಾಮ ಅವರು ಅವಲಂಬನೆಯಾಗಿರುವುದರ ಸೂಚನೆಗಳು ಕಾಣುತ್ತವೆ. ಇಷ್ಟನ್ನೇ ಓದಿಕೊಂಡು ಮುಗಿಸಿಬಿಟ್ಟರೆ ಕಂಬಾರರ ವ್ಯಕ್ತಿತ್ವದ ಚಹರೆಯ ಕೆಲವು ಅಗೋಚರ ಗೆರೆಗಳನ್ನಷ್ಟೇ ಗುರ್ತಿಸಿ ಮುಗಿಸಿದಂತಾಗುತ್ತದೆ. ಸಂದರ್ಶನವನ್ನು ಇನ್ನಷ್ಟು ಸೂಕ್ಷ್ಮವಾಗಿ ಓದಿದಾಗ 'ಬಿಟ್ವೀನ್ ದಿ ಲೈನ್ಸ್' ಇರುವ ಹಲವು ಸಂಗತಿಗಳು ಮುನ್ನೆಲೆಗೆ ಬಂದು ಅಚ್ಚರಿ ಹುಟ್ಟಿಸುತ್ತದೆ.

ಎಂ.ಎಸ್. ಆಶಾದೇವಿ ಈ ಸಂದರ್ಶನ ಮಾಡಿದ್ದಾರೆ. ಅವರು ಮಾಡಿದ್ದರಿಂದಲೇ ಅಥವಾ ಒಬ್ಬಳು ಹೆಣ್ಣು ಈ ಸಂದರ್ಶನ ಮಾಡಿದ್ದರಿಂದಲೇ ವಿಶೇಷ ಹೊಳಪು ಲಭ್ಯವಾಗಿದೆ. ಮೇಲ್ನೋಟಕ್ಕೆ 'ಯಜಮಾನರಿಗೆ' ಶರಣುಹೋದಂತೆ ಕಾಣುವ ಮಾತುಗಳನ್ನೇ ಇನ್ನೊಮ್ಮೆ ಗಮನಿಸಿದರೆ ಅದರಡಿಯಲ್ಲಿ ಪ್ರವಹಿಸುತ್ತಿರುವ ಹರಿತ ವ್ಯಂಗ್ಯ ಕಾಣುತ್ತದೆ. ಸಿನಿಮಾ ಮಾಡುವಾಗ ತಡವಾಗಿ ಬರುತ್ತಿದ್ದದ್ದು, ತಾನು ಮನೆಯಿಂದ ಹೊರಗೆ ಹೋಗುವುದು, ಸತ್ಯಭಾಮಾರ ವಿದ್ಯಾಭ್ಯಾಸ ಮುಂದುವರಿಯುವುದು ಕಂಬಾರರಿಗೆ ಇಷ್ಟವಿಲ್ಲ ಎಂಬುದು, ಸೀರೆಯನ್ನೂ ಅವರೇ ಆರಿಸಿ ತರುವುದು; ಅದಕ್ಕೆ ಕಾರಣವನ್ನೂ ಕೊಡುವುದು – ಈ ಎಲ್ಲ ಸಂಗತಿಗಳೂ ನಮಗೆ ಗೊತ್ತಿಲ್ಲದ ಕಂಬಾರರನ್ನು ಕಾಣಿಸುತ್ತವೆ. ಆರಂಭದಲ್ಲಿ 'ಕಂಬಾರರ ಹೆಂಡತಿ' ಎಂದುಕೊಂಡು ಓದಲು ತೊಡಗಿದ್ದು ನಂತರ ಕಂಬಾರರು ಮರೆತು ಸತ್ಯಭಾಮ ಅವರ ಪೂರ್ಣಚಿತ್ರ ಮನಸಲ್ಲಿ ಕೂತುಕೊಳ್ಳುವುದು ಸಂದರ್ಶನದ ಹೆಗ್ಗಳಿಕೆ. ತುಂಬು ವ್ಯಕ್ತಿತ್ವವೊಂದರ ಜತೆಗೆ ತುಸು ಹೊತ್ತು ಕುಂತು ಎದ್ದು ಬಂದ ಅನುಭವ ನೀಡುವ ಇಂಥ ಆಪ್ತ ಮಾತುಕತೆಗಳು ಪತ್ರಿಕೆಯಲ್ಲಿ ಮತ್ತೆ ಮತ್ತೆ ಬರುತ್ತಿರಲಿ.

—ಆಯೇಷಾ, ಯಲ್ಲಾಪುರ

## ಪೇಡಾದಂತೆ ಸಿಹಿ!

ಕಂಬಾರರೊಂದಿಗೆ ತಮ್ಮ ನಂಟು–ಆತ್ಮೀಯತೆ ಕುರಿತು ಸತ್ಯಭಾಮಾ ಅವರು ಮುಕ್ತವಾಗಿ ಮಾತನಾಡಿದ್ದಾರೆ. ಸಂದರ್ಶನ ಓದಿ ಅವರ ಬಗ್ಗೆ ಅಭಿಮಾನ, ಗೌರವ ಮೂಡಿತು.

—ಬಿ. ಮನೋಹರ, ಚಳ್ಳಕೆರೆ; ಸುಂದರ್, ಬೆಂಗಳೂರು

**ಟೀಕೆ-ಟಿಪ್ಪಣಿಗಳಿಗೆ ಸ್ವಾಗತ**

'ಸುಧಾ'ದಲ್ಲಿನ ಬರಹಗಳ ಕುರಿತಂತೆ ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in

## ಮೇಲ್ದರ್ಜೆಗೇರಿದ ಆಭರಣ

ಫ್ಯಾಷನ್ ಅಂಕಣದಲ್ಲಿ 'ಶಂಖ, ಚಿಪ್ಪು ಆಭರಣ' (ಆಶಾ ಎಸ್. ಕುಲಕರ್ಣಿ) ಲೇಖನ ಚೆನ್ನಾಗಿದೆ. ಒಂದೊಮ್ಮೆ ಶಂಖ, ಕಪ್ಪೆಚಿಪ್ಪು, ಮುತ್ತಿನ ಚಿಪ್ಪು ಇತ್ಯಾದಿ ಮಕ್ಕಳ ಆಟದ ವಸ್ತುಗಳಾಗಿ ಬಳಕೆಯಾಗುತ್ತಿದ್ದುದು ಈಗ ಸಿಕ್ಕಿರುವ ಹೆಂಗಳೆಯರ ಆಭರಣವಾಗಿ ಮೇಲ್ದರ್ಜೆಗೇರಿದೆ.

—ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಮನೆಯಂಗಳದಲ್ಲಿ ಬಸಳೆ

'ಹೆಲ್ತ್‌ಪ್ಲಸ್' ಅಂಕಣದಲ್ಲಿಯ 'ಹೃದಯ ಸ್ನೇಹಿ ಬಸಳೆ' ಬರಹ ಉಪಯುಕ್ತ. ಬಸಳೆ ಸೊಪ್ಪಿನ ಸಾರು ರುಚಿಕಟ್ಟಾಗಿದ್ದು, ಅದರಲ್ಲಿಯ 'ಆಂಟಿ ಆಕ್ಸಿಡೆಂಟ್' ಗುಣ ಒಳ್ಳೆಯದು. ಬಸಳೆಸೊಪ್ಪನ್ನು ಮನೆಯಂಗಳದಲ್ಲೇ ಬೆಳೆಯಬಹುದು. ಮನೆಯಂಗಳ ಆರೋಗ್ಯದ ಸಂಕೇತವೂ ಹೌದು.

—ರಾಜಶೇಖರ ಹಾದಿಮನಿ, ಧಾರವಾಡ